**<u>ಸಾಕ್ಷಿಯನ್ನು ದಿನಾಂಕಃ06.02.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಟಿ ಎಂ ಎಸ್ ವಕೀಲರಿಂದ:</u>**

ನಿಪಿ.17ರಲ್ಲಿ ಜವರೇಗೌಡರಿಗೆ ಎಷ್ಟು ಜನ ಸಹೋದರರು ಎಂದು ನಮೂದಾಗಿಲ್ಲ ಎಂದರೆ ಸರಿ. ದಾವಾ ಆಸ್ತಿ ಮೂಲತಃ ಜವರೇಗೌಡರಿಗೆ ಸೇರಿತ್ತು ಎಂದರೆ ಸರಿ. ಜವರೇಗೌಡರ ತಂದೆ ಲಕ್ಕಣ್ಣನಿಗೆ ಎಷ್ಟು ಜನ ಮಕ್ಕಳು ಎಂದು ನಿಪಿ.17ರಲ್ಲಿ ತೋರಿಸಿಲ್ಲ ಎಂದರೆ ಸರಿ. ಲಕ್ಕಣ್ಣನ ಮೂರು ಮಕ್ಕಳ ನಡುವೆ ಯಾವಾಗ ವಿಭಾಗವಾಯಿತು ಮತ್ತು ಯಾವ ಆಸ್ತಿಗಳು ಯಾರಿಗೆ ಹೋಯಿತು ಎಂದು ದಾಖಲೆ ಹಾಜರುಪಡಿಸಿಲ್ಲ. ನಿಪಿ.17ರ ಜವರೇಗೌಡರ ಮಕ್ಕಳ ನಡುವೆ ವಿಭಾಗವಾಯಿತು ಎನ್ನುವ ಕುರಿತು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಜವರೇಗೌಡರ ಮಕ್ಕಳ ನಡುವೆ 20-30 ವರ್ಷಗಳ ಹಿಂದೆ ವಿಭಾಗವಾಗಿತ್ತು. ಸದರಿ ವಿಭಾಗ ಪತ್ರ ನನ್ನ ಬಳಿ ಇರುವುದಿಲ್ಲ. ಸದರಿ ವಿಭಾಗದಲ್ಲಿ ಜವರೇಗೌಡರ ಮೊದಲ ಮಗನಿಗೆ ಸರ್ವೆ ನಂ.46/14 ಮತ್ತು 46/15 ಬಂದಿದ್ದವು. ಸದರಿ ವಿಭಾಗದಲ್ಲಿ ಜವರೇಗೌಡರ ಎರಡನೇ ಮಗನ ಹುಚ್ಚಪ್ಪನಿಗೆ ಯಾವ ಆಸ್ತಿಗಳು ಬಂದ್ದಿದವು ಎಂದು ನನಗೆ ಗೊತ್ತಿಲ್ಲ. ನಿಪಿ.17ರಲ್ಲಿ ಹುಚ್ಚಪ್ಪನ ಮಕ್ಕಳನ್ನು ತೋರಿಸಿಲ್ಲ ಎಂದರೆ ಸರಿ. ಹುಚ್ಚಪ್ಪನ ಭಾಗಕ್ಕೆ ಬಂದ ಆಸ್ತಿಗಳನ್ನು ಮಾರಾಟ ಮಾಡಿಕೊಂಡಿರುತ್ತಾರೆ. ಆ ರೀತಿ ಮಾರಾಟ ಮಾಡಿದ ಆಸ್ತಿಗಳ ಸಂಖ್ಯೆ ಗೊತ್ತಿಲ್ಲ. ಆ ರೀತಿ ಮಾರಾಟ ಮಾಡಿದ ಆಸ್ತಿಗಳನ್ನು ಯಾರು ಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ಸದರಿ ಮಾರಾಟ ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆ ಮಾರಾಟದ ಕುರಿತು ದಾಖಲಾತಿಗಳನ್ನು ಹಾಜರುಪಡಿಸಲಾಗುವುದಿಲ್ಲ. ಜವರೇಗೌಡರ ಮೂರನೇ ಮಗನಿಗೆ ಯಾವ ಆಸ್ತಿಗಳು ಬಂದ್ದಿದವು ಎಂದು ನನಗೆ ಗೊತ್ತಿಲ್ಲ. ಜವರೇಗೌಡರ ನಾಲ್ಕನೇ ಮತ್ತು ಐದನೇ ಮಗನಿಗೆ ಯಾವ ಆಸ್ತಿಗಳು ಬಂದ್ದಿದವು ಎಂದು ನನಗೆ ಗೊತ್ತಿಲ್ಲ. ಜವರೇಗೌಡರಿಗೆ ಯಾವ ಆಸ್ತಿಗಳು ಬಂದ್ದಿದವು ಎಂದು ನನಗೆ ನೆನಪಿಲ್ಲ. ನಿಪಿ.17ರಲ್ಲಿ ಚಿಕ್ಕಣ್ಣನವರ ವಂಶಸ್ಥರನ್ನು ತೋರಿಸಿಲ್ಲ ಎಂದರೆ ಸರಿ. ಸದರಿಯವರುಗಳ ಹೆಸರು ನನಗೆ ನೆನಪಿಲ್ಲ.

ಚಿಕ್ಕಣ್ಣನವರಿಗೆ ಮೂರು ಅಥವಾ ನಾಲ್ಕು ಜನ ಮಕ್ಕಳಿರಬಹುದು. ಹುಚ್ಚಪ್ಪನವರಿಗೆ 4 ಜನ ಮಕ್ಕಳು. ಹುಚ್ಚಪ್ಪ, ಚಿಕ್ಕಣ್ಣ, ಕಳಸಪ್ಪ ಮತ್ತು ಎಲ್ ಲಕ್ಕಣ್ಣನವರುಗಳ ಮಕ್ಕಳುಗಳನ್ನು ಈ ದಾವೇಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ವಿಭಾಗವಾದ ಕಾರಣ ಸೇರಿಸಿಲ್ಲ ಎಂದು ನುಡಿಯುತ್ತಾರೆ,

**ಮುಂದುವರೆದ ವಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.**

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.